

ಸಂಪಾದಕೀಯ

# ಬೆಳಕ ಬೀರುವ ಹಾದಿ

## ಭಾಗ ೪

**ಕ**ಳೆದ ಸಂಚಿಕೆಗಳಲ್ಲಿ ಧರ್ಮಗಳ ಉಗಮ-ಬೆಳವಣಿಗೆ, ಅದಕ್ಕೆ ಮೂಲವಾದ ಆಧ್ಯಾತ್ಮಿಕ ಅನುಭವ, ಮಾನವನ ಜೀವನದಲ್ಲಿ ಅವು ಹೊಸ ಮಾರ್ಗವಾಗಿ ರೂಪುಗೊಂಡ ಬಗೆ — ಈ ಕೆಲವು ಸಂಗತಿಗಳನ್ನು ಚರ್ಚಿಸಿದ್ದೇವೆ. ಪ್ರಪಂಚದ ಧಾರ್ಮಿಕ, ಆಧ್ಯಾತ್ಮಿಕ ಇತಿಹಾಸದಲ್ಲಿ ಅಚ್ಚಳಿಯದ ಮುದ್ರೆಯನ್ನು ಒತ್ತಿದ, ಹಾಗೂ ಮಾನವನ ವಿಕಾಸದಲ್ಲಿ ಒಂದು ಹೊಸ ಪ್ರವಾಹವನ್ನೇ ಮೂಡಿಸಿದ ಅವತಾರ ಪುರುಷರ ವಿಷಯವಾಗಿ ಈಗ ಅವಲೋಕಿಸೋಣ.

### ಅವತಾರವೆಂದರೇನು?

ಸಾಧು-ಸಂತರು, ಋಷಿಮುನಿಗಳು, ದಿವ್ಯಪುರುಷರು, ಯೋಗಿಗಳು, ಅವತಾರ ಪುರುಷರು ಇವರೆಲ್ಲ ಧರ್ಮ ಅಥವಾ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಪೂಜ್ಯರಾದ ಮಹಾತ್ಮರು ಎಂದು ನಾವು ಈ ಬಗೆಯ ವ್ಯಕ್ತಿಗಳನ್ನೆಲ್ಲ ಸರಳವಾಗಿ ತಿಳಿದುಕೊಂಡು ಬಿಡುತ್ತೇವೆ. ಇವರೆಲ್ಲರ ಜೀವನ, ಸ್ವಭಾವ, ಶಕ್ತಿಸಾಮರ್ಥ್ಯ ಹಾಗೂ ದಿವ್ಯತೆಗಳಲ್ಲಿ ಅಗಾಧ ವ್ಯತ್ಯಾಸವಿದೆ; ಅದರಲ್ಲೂ, ಉಳಿದವರಿಗಿಂತ ಅವತಾರಿಗಳು ಸಂಪೂರ್ಣ ಬೇರೆ ನಿಲ್ಲುತ್ತಾರೆ. ಅವತಾರಿಗಳಿಗೂ ಉಳಿದ ಮಹಾತ್ಮರಿಗೂ ಇರುವ ಒಂದು ಪ್ರಧಾನ ವ್ಯತ್ಯಾಸವಿದು: ಉಳಿದವರೆಲ್ಲ ಜೀವನವಿಡೀ ಸಾಧನೆ ಮಾಡಿ, ನಾನಾ ಬಗೆಯ ಪ್ರಯತ್ನಗಳ ಮೂಲಕ ಭಗವಂತನ ಸಾಕ್ಷಾತ್ಕಾರ ಪಡೆಯುತ್ತಾರೆ. ಆದರೆ ಅವತಾರಪುರುಷರು ಜನ್ಮತಃ ದಿವ್ಯತೆಯನ್ನು ವ್ಯಕ್ತಪಡಿಸುತ್ತಾರೆ. ಅವರ ಬಾಲ್ಯದಿಂದಲೂ ಅಪ್ರಯತ್ನವಾಗಿ ದೈವೀ ಘಟನೆಗಳು ಘಟಿಸುತ್ತವೆ. ಅವರ ಸಾಧನೆಯೇನಿದ್ದರೂ ಜಗತ್ತಿಗೆ ಶಿಕ್ಷಣ ನೀಡುವುದಕ್ಕಾಗಿ. 'ಹೀಗೆ ಸಾಧನೆ ಮಾಡಿ ದೇವರನ್ನು ಕಂಡುಕೊಳ್ಳಬಹುದು' ಎಂದು ದಾರಿ ತೋರಿಸಿಕೊಡುವುದಕ್ಕಾಗಿ. ಉಳಿದ ಮಹಾಪುರುಷರೆಲ್ಲ ಸಾಧನೆ ಮಾಡಿ ಮಾನವತ್ವದಿಂದ ದೈವತ್ವದ ಕಡೆಗೆ ಸಾಗುತ್ತಾರೆ. ಅವತಾರಪುರುಷರೆಂದರೆ, ಸ್ವತಃ ಭಗವಂತನೇ ಇಚ್ಛಾಪೂರ್ವಕವಾಗಿ ಮಾನವರ ಉದ್ಧಾರಕ್ಕಾಗಿ ಮನುಷ್ಯ ಜನ್ಮವೆತ್ತಿ ಬಂದಿರುತ್ತಾನೆ. ಈ ಕಾರಣದಿಂದಲೇ ಅವತಾರಗಳ ಶಕ್ತಿ, ಸಾಮರ್ಥ್ಯ, ದಿವ್ಯತೆಗಳು ಉಳಿದ ಮಹಾತ್ಮರುಗಳಿಗಿಂತ ನೂರು ಪಟ್ಟು, ಸಾವಿರ ಪಟ್ಟು ಇಲ್ಲ, ಅಗಣಿತ ಸಂಖ್ಯೆಯಷ್ಟು ಹೆಚ್ಚು. ಆದ ಕಾರಣವೇ ಅವತಾರ ಪುರುಷನು ಒಂದೊಂದು ಯುಗದಲ್ಲೂ ಕಾಲದ ಆವಶ್ಯಕತೆಗೆ ಅನುಗುಣವಾಗಿ ಯೋಗ್ಯವಾದ ಪ್ರದೇಶದಲ್ಲಿ ಜನಿಸುತ್ತಾನೆ; ಅಲ್ಲಿನ ಜನತೆಯ ಮೇಲೆ ಗಾಢ ಪ್ರಭಾವ ಬೀರುತ್ತಾನೆ. ಉಳಿದ ಮಹಾತ್ಮರ ಪ್ರಭಾವ ಸೀಮಿತ ಪ್ರದೇಶದ, ಸೀಮಿತ ವ್ಯಕ್ತಿಗಳ ಮೇಲಾಗುವುದು; ಅವತಾರಗಳ ಪ್ರಭಾವ ಎಲ್ಲ ಎಲ್ಲೆಗಳನ್ನೂ ಮೀರಿ ವ್ಯಾಪಿಸುವುದು.

### ಅವತಾರ ಪುರುಷರ ಸಂಖ್ಯೆ

ಆಧ್ಯಾತ್ಮಿಕ ಕ್ಷೇತ್ರದಲ್ಲಿ ತುಂಬ ಚರ್ಚೆಗೊಳಗಾದ, ಸಾಕಷ್ಟು ವಿವಾದಗಳಿಗೆ ಎಡೆಮಾಡಿಕೊಟ್ಟ ಅಂಶವೆಂದರೆ, ಅವತಾರಗಳು ಎಷ್ಟು ಎಂಬುದು. ಕೆಲವೊಂದು ಧರ್ಮಗಳ ಪ್ರಕಾರ, ಅವರ ಧರ್ಮದ ಮೂಲ ಪುರುಷನೊಬ್ಬನೇ ಅವತಾರ (ಅಥವಾ ಪ್ರವಾದಿ). ಅವರು ಇತರ ಧರ್ಮಗಳಲ್ಲೂ ಅವತಾರಗಳಿರಬಹುದು ಎಂಬ ಸಾಧ್ಯತೆಯನ್ನೇ ಒಪ್ಪುವುದಿಲ್ಲ. ಇನ್ನು ಕೆಲವು ಧರ್ಮಗಳಲ್ಲಿ, ವಿಶೇಷವಾಗಿ ಭಾರತದಲ್ಲಿ ಜನಿಸಿದ ಧರ್ಮಗಳಲ್ಲಿ (ಜೈನ, ಬೌದ್ಧವೂ ಸೇರಿದಂತೆ) ಹಲವು ಅವತಾರಗಳು ಇರಬಹುದು; ಆದರೆ ಎಷ್ಟು ಮಂದಿ ಅವತಾರ ಪುರುಷರು, ಯಾರೆಲ್ಲ ಅವತಾರಗಳು ಎಂಬುದು ಇಲ್ಲೂ ವಿವಾದದ ಸಂಗತಿ. ಹಲವು ಪಂಥಗಳಿರುವ, ವಿವಿಧ ತತ್ತ್ವಗಳಿರುವ ಹಿಂದೂಧರ್ಮದಲ್ಲಿ ಈ ಕುರಿತು ಸಾಕಷ್ಟು ಚರ್ಚೆಯಾಗಿದೆ. ಈ ವಾದ ವಿವಾದಗಳಿಂದಾಗಿ ಯಾವ ಖಚಿತ ಅಭಿಪ್ರಾಯವೂ ಮೂಡಿ ಬರುವುದಿಲ್ಲ. ಉದಾಹರಣೆಗೆ, ವೈಷ್ಣವ ಪಂಥದವರು 'ದಶಾವತಾರ'ವೆಂದು ಅವತಾರಗಳ ಸಂಖ್ಯೆ ಹತ್ತು ಎನ್ನುತ್ತಾರೆ; ಭಾಗವತದಂಥ ಗ್ರಂಥಗಳಲ್ಲಿ ಇದು ಮೂವತ್ತೈದಕ್ಕೂ ಹೆಚ್ಚು ಎನ್ನಲಾಗಿದೆ. ಇನ್ನು ಭಗವದ್ಗೀತೆಯಂತೂ, **'ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ'** (ಅರ್ಜುನ, ನನಗೂ ನಿನಗೂ ಅನೇಕ ಜನ್ಮಗಳು ಕಳೆದು ಹೋದವು) ಎಂಬುದಾಗಿಯೂ, **'ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ। ಅಭ್ಯುತ್ಥಾನಮಧರ್ಮಸ್ಯ ತದಾಽತ್ಮಾನಂ ಸೃಜಾಮ್ಯಹಮ್'**

—'ಅರ್ಜುನ, ಯಾವಾಗ ಧರ್ಮದ ಅವನತಿ ಹಾಗೂ ಅಧರ್ಮದ ಉನ್ನತಿಯಾಗುತ್ತದೋ ಆಗೆಲ್ಲ ನಾನು ಅವತಾರ ಮಾಡುತ್ತೇನೆ' ಎಂದೂ ಹೇಳುತ್ತದೆ *(ಗೀತೆ, ೪.೪-೮)*. ಇಲ್ಲಿ ಅವತಾರಗಳು ಅಸಂಖ್ಯವೆಂಬ ಸಂಗತಿ ಸೂಚಿಸಲ್ಪಟ್ಟಿದೆ. ಇನ್ನು ಯಾರನ್ನು ಅವತಾರವೆನ್ನಬೇಕು ಎಂಬ ವಿಚಾರದಲ್ಲೂ ಗೊಂದಲ ವಿದ್ದಂತಿದೆ. ದಶಾವತಾರವೆಂದಾಗ, ಕೆಲವರು ಅಲ್ಲಿ ಬಲರಾಮ ನನ್ನು ಸೇರಿಸುತ್ತಾರೆ; ಇನ್ನು ಕೆಲವರು ಪರಶುರಾಮನನ್ನು ಸೇರಿಸುತ್ತಾರೆ. ಎಲ್ಲ ಹತ್ತು ಅವತಾರಗಳಿಗೂ ಮೂಲಪುರುಷ ನಾದ ಶ್ರೀಕೃಷ್ಣನನ್ನು ಪೂರ್ಣಾವತಾರವೆಂದು ಕರೆದು, ಅವನನ್ನು ಆ ಹತ್ತರಲ್ಲಿ ಒಂದಾಗಿ ಸೇರಿಸುವುದಿಲ್ಲ. ಇಂಥ ಗೊಂದಲಗಳಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ: ಅವತಾರಗಳು ಇಷ್ಟೇ ಎಂದಾ ಗಲೀ, ಇಂತಿಂಥವರು ಎಂದಾಗಲೀ ಖಚಿತವಾಗಿ ಹೇಳಲು ಯಾವುದೇ ಮಾನದಂಡವನ್ನು ನಮ್ಮ ಶಾಸ್ತ್ರಗ್ರಂಥಗಳು ನೀಡುವು ದಿಲ್ಲ. ಅವತಾರ ತತ್ತ್ವವನ್ನು ಹೆಚ್ಚು ಪ್ರಚಾರಪಡಿಸಿದ ಪುರಾಣ ಗ್ರಂಥಗಳಲ್ಲೂ ವಿವಿಧ ಸಂದರ್ಭಗಳಿಗೆ ಅನುಸಾರವಾಗಿ ಭಗ ವಂತನ ಅವತಾರವೆಂದೋ, ಶಿವನ ಅಥವಾ ವಿಷ್ಣುವಿನ ಅಂಶ ವೆಂದೋ ಹಲವು ಮಂದಿ ಮಹಿಮಾನ್ವಿತರ ಚರಿತ್ರೆಯನ್ನು ಹೇಳ ಲಾಗಿದೆ. ಈ ಕಾರಣದಿಂದ ಅವತಾರಗಳ ಸಂಖ್ಯೆಯನ್ನು ಕುರಿತು ಹಾಗೂ ಯಾರು ಅವತಾರವೆಂಬುದನ್ನು ಕುರಿತು ಗೊಂದಲ ವುಂಟಾಗಿದೆ.

## ಅವತಾರ ತತ್ತ್ವ

ಅವತಾರವೆಂದರೆ ಹೀಗೆ, ಈ ರೀತಿಯಲ್ಲಿ ಹಾಗೂ ಇವು ಅವ ತಾರಗಳ ಲಕ್ಷಣ ಎಂದು ಶಾಸ್ತ್ರಗ್ರಂಥಗಳಲ್ಲಿ ಒಮ್ಮತದಿಂದ ತತ್ತ್ವ ನಿರೂಪಣೆಯಾಗಿಲ್ಲದಿದ್ದರೂ, ಹಲವು ಮಂದಿ ಅವತಾರಪುರುಷರ ಜೀವನ, ಮಹತ್ಕಾರ್ಯ ಹಾಗೂ ಅವರುಗಳ ಸ್ವಭಾವಗಳನ್ನು ಅವಲಂಬಿಸಿ ಕೆಲವೊಂದು ವಿಶೇಷ ಸಂಗತಿಗಳನ್ನು ನಾವು ಕಂಡು ಕೊಳ್ಳಬಹುದು. ಸ್ವಾಮಿ ಶಾರದಾನಂದರು ಈ ವಿಚಾರವಾಗಿ ಬರೆಯುತ್ತಾರೆ: ''ಅವತಾರ ಪುರುಷನು ಈಶ್ವರನಂತೆಯೇ ನಿತ್ಯ ಶುದ್ಧ ಬುದ್ಧ ಮುಕ್ತ ಸ್ವಭಾವದವನು ಜೀವಿಯಂತೆ ಅವನು ಎಂದೂ ಕರ್ಮಬಂಧನಕ್ಕೆ ಒಳಗಾಗುವುದಿಲ್ಲ. ಏಕೆಂದರೆ ಸಾಮಾನ್ಯ ಜೀವಿಗಳಂತೆ ಭೋಗಸುಖ ಪ್ರಾಪ್ತಿಗಾಗಿ ಸ್ವಾರ್ಥಕ್ರಿಯೆಯಲ್ಲಿ ಅವನು ತೊಡಗುವುದೇ ಇಲ್ಲ. ಶರೀರಧಾರಣೆಯಿಂದ ಹಿಡಿದು ಅವನ ಪ್ರತಿಯೊಂದು ಕ್ರಿಯೆಯೂ ಪರಹಿತಕ್ಕಾಗಿಯೇ ಮೀಸಲು. ಮಾಯೆಯ ಅಜ್ಞಾನದ ಬಂಧನಕ್ಕೆ ಅವನು ಎಂದೂ ಒಳಗಾಗದೆ ಇರುವುದರಿಂದ ಹಿಂದೆ ಅವನು ಪಡೆದ ಜನ್ಮಗಳ ಸ್ಮೃತಿ ಅವನಿಗೆ ಸ್ಪಷ್ಟವಾಗಿರುತ್ತದೆ.'' *(ಶ್ರೀರಾಮಕೃಷ್ಣ ಲೀಲಾಪ್ರಸಂಗ, ಸಂ. ೧, ಪು.೫)* ಈ ಗ್ರಂಥದಲ್ಲಿ ಲೇಖಕರು ಅವತಾರ ಪುರುಷರ ವಿಶೇಷ ಗುಣಲಕ್ಷಣಗಳನ್ನು ಹಲವು ದೃಷ್ಟಾಂತಗಳೊಡನೆ ವಿವರಿಸಿದ್ದಾರೆ.

ಅವರು ಗುರುತಿಸುವಂತೆ ಅವತಾರ ಪುರುಷರಲ್ಲೆಲ್ಲ ಕಂಡು ಬರುವ ಸಮಾನ ಅಂಶಗಳನ್ನು ಹೀಗೆ ಗುರುತಿಸಬಹುದು: ೧) ಧರ್ಮಸಂಸ್ಥಾಪನೆಯೇ ಅವತಾರಗಳ ಉದ್ದೇಶ. ೨) ಭಗ ವಂತನು ಸ್ವ-ಇಚ್ಛೆಯಿಂದ ಮಾನವ ಜನ್ಮವೆತ್ತಿ ಬರುವುದೇ ಅವ ತರಣ (ಅವ-ತರಣ = 'ಕೆಳಗೆ ಇಳಿದು ಬರುವುದು.') ೩) ಬಾಲ್ಯ ದಿಂದಲೇ ಅವರ ದೈವೀಸ್ವಭಾವ ವ್ಯಕ್ತಗೊಳ್ಳುವುದು. ೪) ಅವರಿಗೆ ಕರ್ಮಬಂಧನವಿಲ್ಲ; ನಿತ್ಯ ಶುದ್ಧ ಬುದ್ಧ ಮುಕ್ತ ಸ್ವಭಾವದವರು. ೫) ಅವರಲ್ಲಿ ಅದ್ಭುತ ಸ್ಮೃತಿಶಕ್ತಿ ಕಂಡುಬರುವುದು. ೬) ಮಾನ ವರ ಹಾಗೂ ಜೀವಿಗಳ ಮೇಲೆ ಅವರಿಗೆ ಅಪಾರ ಕರುಣೆ, ಅನು ಕಂಪ. ೭) ಹಾಗಿದ್ದರೂ ಮಾನವರಿಗೆ ದಾರಿ ತೋರುವುದಕ್ಕಾಗಿ ಮಾನವರಂತೆಯೇ ಎಲ್ಲ ಸುಖ, ದುಃಖಾದಿ ಅನುಭವಗಳನ್ನು ಹೊಂದುತ್ತಾರೆ. ೮) ನಿರ್ವಿಕಲ್ಪ ಸಮಾಧಿಯಂತಹ ಅತ್ಯುನ್ನತ ಆಧ್ಯಾತ್ಮಿಕ ಅನುಭವಗಳು ಅವತಾರ ಪುರುಷರಿಗೆ ಮಾತ್ರ ಸಾಧ್ಯ. ೯) ಕೆಲವೊಮ್ಮೆ ಅಮಾನುಷ, ಅತ್ಯದ್ಭುತ ಕಾರ್ಯಗಳನ್ನು ಮಾಡಿ ತೋರಿಸುತ್ತಾರೆ.

## ಧರ್ಮದ ಚೌಕಟ್ಟಿನಾಚೆಗೆ

ಭಗವದಿಚ್ಛೆಯ ಮೇರೆಗೆ ಜನ್ಮತಳೆಯುವುದಾದರೂ, ಒಂದು ಕಾಲದ ಹಾಗೂ ಒಂದು ಸನ್ನಿವೇಶದ ಅಗತ್ಯಕ್ಕೆ ತಕ್ಕಂತೆ ಅವ ತಾರಪುರುಷನ ಜನನವುಂಟಾಗುತ್ತದೆ. ಅವನು ಅವತಾರವೆತ್ತಿ ಬರುವುದು ಜಗತ್ತಿನ ಉದ್ಧಾರಕ್ಕೆ; ಆದ್ದರಿಂದ ಆಯಾ ಕಾಲ ಹಾಗೂ ಸಮಾಜದಲ್ಲಿ ಕಂಡುಬರುವ ವಿಶೇಷ ಗುಣ, ಸ್ವಭಾವಗಳು ಅವತಾರ ಪುರುಷನಲ್ಲಿ ಕಂಡುಬರುವುದು ಸ್ವಾಭಾವಿಕ. ಆದರೆ ಅವನ ಮಹಿಮೆ ವಿಸ್ತಾರಗೊಂಡಂತೆಲ್ಲಾ, ಅವನ ದೃಷ್ಟಿಕೋನವು ವಿಶಾಲಗೊಂಡು, ಅವನ ಪ್ರಭಾವ ಹಾಗೂ ಕಾರ್ಯವ್ಯಾಪ್ತಿ ಎಲ್ಲ ಮಿತಿಯನ್ನೂ ಮೀರಿ ಸಾಗುತ್ತದೆ. ಕೇವಲ ನಂದಗೋಕುಲದ ಕೃಷ್ಣ, ಅಯೋಧ್ಯೆಯ ರಾಮ ಅಲ್ಲಿನವರಾಗಿಯೇ ಉಳಿಯಲಿಲ್ಲ. ಇನ್ನೂ ವಿಶಾಲವಾದ ರಾಜ್ಯಗಳ, ಜನಸಮುದಾಯಗಳ ಮಾರ್ಗ ದರ್ಶಕರಾಗಿ ಮಾರ್ಪಟ್ಟರು. ಕೊನೆಗೆ ಈ ಭಾವನೆ ಜನರ ನಡುವೆ ಆರಾಧನೆಯ ರೂಪು ತಾಳಿ, ಅವರು 'ಜಗದ್ರಕ್ಷಕ'ರೂ 'ಜಗ ತ್ಪಾಲಕ'ರೂ ಆದರು; ಅವರ ಕಾರ್ಯಗಳೆಲ್ಲ ಧರ್ಮಸಂರ ಕ್ಷಣೆಯ, ಸತ್ಯಧರ್ಮಗಳನ್ನು ಎತ್ತಿ ಹಿಡಿಯುವ ಕೆಲಸವಾಯಿತು. ಎಲ್ಲಕ್ಕಿಂತ ಮುಖ್ಯವಾದ ಅಂಶವೆಂದರೆ, ಅವತಾರಪುರುಷರ ಅನುಕಂಪ, ಪ್ರೇಮ, ದಯೆ ಕೇವಲ ಒಂದು ಧರ್ಮಕ್ಕೋ, ಒಂದು ಸಮಾಜಕ್ಕೋ ಸೀಮಿತವಾಗದೆ, ವಿಶ್ವವ್ಯಾಪಕವಾದ, ಮಾನವರೆಲ್ಲರನ್ನೂ ಒಳಗೊಳ್ಳುವ, ಅದನ್ನೂ ಮೀರಿ ಪಶು-ಪಕ್ಷಿ ಪ್ರಾಣಿ, ಸಸ್ಯ, ಮನುಷ್ಯ, ಗಂಧರ್ವ, ಯಕ್ಷಕಿನ್ನರಾದಿ ಜೀವಕೋಟಿ ಗಳನ್ನೆಲ್ಲ ಉದ್ಧರಿಸುವ ಒಂದು ಮಹಾಶಕ್ತಿಯಾಗಿ ಅವು ಕಾಣಿಸಿ ಕೊಳ್ಳುತ್ತವೆ. ಕೃಷ್ಣ, ರಾಮ, ಬುದ್ಧ, ಏಸು, ಚೈತನ್ಯರೆಲ್ಲ ಈ ವಿಶಿಷ್ಟ ಗುಣವನ್ನು ಹೊಂದಿದ್ದರು. ಅವರ ದೈವೀ ವ್ಯಕ್ತಿತ್ವಕ್ಕೆ ಇಡೀ ಜಗತ್ತೇ ಮಾರುಹೋಗುವುದು; ಅಂಥವರನ್ನು ಅರಿತುಕೊಂಡಷ್ಟೂ ಆ ವ್ಯಕ್ತಿತ್ವ ಇನ್ನಷ್ಟು ಉನ್ನತಿಗೇರುವುದು. ಈ ಪ್ರಪಂಚವನ್ನು ಮೀರಿದ, ಎಲ್ಲ ಸತ್ಯಗಳಿಗೂ ಸತ್ಯವಾದ ಅವ್ಯಕ್ತ ತತ್ತ್ವದಲ್ಲೇ ಅವರು ಒಂದಾಗಿರುವುದು ಅರ್ಥವಾಗುವುದು.

## ಹಲವು ಮಂದಿ ಸಂತರಿಗೆ ಸ್ಫೂರ್ತಿ

ಪ್ರಪಂಚದಲ್ಲಿ ಅವತಾರ ಪುರುಷರ ಜನನವೆಂದರೆ ಅದೊಂದು ದೊಡ್ಡ ಆಧ್ಯಾತ್ಮಿಕ ಪ್ರವಾಹವೇ ಬಂದಂತೆ. ಬೃಹತ್ತಾದ ನದೀ ಪ್ರವಾಹದಲ್ಲಿ ಮರಗಿಡಬಳ್ಳಿಗಳೆನ್ನದೆ, ಮಣ್ಣು, ಕಲ್ಲು ಮನೆ-ಮಠ ವೆನ್ನದೆ, ಹಳ್ಳ, ತಗ್ಗು, ಕಣಿವೆ, ಪರ್ವತವೆನ್ನದೆ ಸಮಸ್ತವೂ ಕೊಚ್ಚಿ ಕೊಂಡು ಹೋಗುವಂತೆ, ಅವತಾರ ಪುರುಷನ ದಿವ್ಯೋನ್ಮಾದದ ಸ್ಫೂರ್ತಿಗೆ ಜನಸಾಮಾನ್ಯರಿಂದ ಹಿಡಿದು ಈಶ್ವರಕೋಟಿಗಳೆಂದು ಭಾವಿಸಲ್ಪಡುವ ಆಧ್ಯಾತ್ಮಿಕ ಜ್ಯೋತಿಗಳೂ ಒಳಗಾಗುತ್ತಾರೆ; ಎಲ್ಲರೂ ಆ ಮಹಾಪುರುಷನ ಪ್ರಭಾವದಿಂದ ಪುನೀತರಾಗುತ್ತಾರೆ. ಅವತಾರ ಪುರುಷರೊಂದಿಗೆ ಒಂದು ವಿಶಿಷ್ಟ ಸಮುದಾಯವೇ ಜನ್ಮತಳೆಯುತ್ತದೆ; ಅವರ ಲೀಲಾಕಾರ್ಯಗಳಲ್ಲಿ ಸಹಾಯಕ ವಾಗುತ್ತದೆ. ಆ ಸಮುದಾಯದಲ್ಲಿ ಪ್ರಮುಖವಾಗಿ ಅವತಾರ ಪುರುಷನ ಶಿಷ್ಯವರ್ಗ, ಇತರ ಪ್ರಮುಖ ಅನುಯಾಯಿಗಳು, ಬಂಧುವರ್ಗ ಬರುತ್ತಾರೆ. ಇವರಲ್ಲಿ ಕೆಲವೇ ಮಂದಿ ಸೀಮಿತ ವ್ಯಕ್ತಿಗಳನ್ನು ಅವತಾರ ಪುರುಷ ತನ್ನ ಅಂತರಂಗ ಅಥವಾ, ತನ್ನ ಆಪ್ತ ಅನುಯಾಯಿಗಳೆಂದು ಭಾವಿಸುತ್ತಾನೆ. ಅವರೇ ಆತನ ಮಹಿಮೆ, ಆದರ್ಶ, ಧ್ಯೇಯ ಹಾಗೂ ಉಪದೇಶಗಳನ್ನು ಮುಂದಿನ ತಲೆಮಾರುಗಳಿಗೆ ದಾಟಿಸುವವರು. ಕೃಷ್ಣನ ಜೀವನದಲ್ಲಿ ಗೋಪಿಕೆ ಯರು, ಯಶೋದೆ, ಅರ್ಜುನ, ವಿದುರ ಇವರೆಲ್ಲ ಈ ರೀತಿ ಬಂದವರು. ಅಂತೆಯೇ ಬುದ್ಧನ ಶಿಷ್ಯ ಆನಂದ, ಕ್ರಿಸ್ತನ ಹನ್ನೆರಡು ಮಂದಿ ಶಿಷ್ಯಂದಿರು, ಚೈತನ್ಯನಿಗೆ ನಿತ್ಯಾನಂದ ಹಾಗೂ ಇತರರು, ಶ್ರೀರಾಮಕೃಷ್ಣರಿಗೆ ಶ್ರೀಮಾತೆ, ಸ್ವಾಮಿ ವಿವೇಕಾ ನಂದರು ಹಾಗೂ ಇನ್ನಿತರ ಹದಿನಾರು ಮಂದಿ ಶಿಷ್ಯಂದಿರು – ಲೀಲಾಸಹಾಯಕರಾಗಿ ಬರುತ್ತಾರೆ. ಹಲವು ವೇಳೆ ಅವರನ್ನು 'ಪಾರ್ಷದರು' ಎಂದೂ 'ಅಂಶಾವತಾರ' ಎಂದೂ ಕರೆಯಲಾಗುತ್ತದೆ. ಇವರೆಲ್ಲ ದೈವಾಂಶ ಸಂಭೂತರು; ಒಂದೊಂದು ರೀತಿಯಲ್ಲಿ ಹಿಂದಿನ ಅವತಾರಗಳ ಅಂಶವನ್ನು ತಳೆದು ಜನ್ಮವೆತ್ತಿದವರು. ಅವತಾರಪುರುಷನ ದೈವೀ ಮಹಿಮೆಯನ್ನು ಸಮರ್ಥವಾಗಿ ಅರಿತುಕೊಳ್ಳುವಲ್ಲಿ ಹಾಗೂ ಅದನ್ನು ಇತರರಿಗೆ ತಿಳಿಯಪಡಿಸುವಲ್ಲಿ ಅವರ ಪಾತ್ರ ಹಿರಿದು. ಅವರೂ ಅವತಾರಪುರುಷನ ಮಾರ್ಗ ದರ್ಶನದಲ್ಲಿ ಸಾಧನೆ ಮಾಡಿ ಸಾಕ್ಷಾತ್ಕಾರವನ್ನು ಹೊಂದುತ್ತಾರೆ; ಈ ಮೂಲಕ ಜನಸಾಮಾನ್ಯರಿಗೆ ಅವರು ಆಧ್ಯಾತ್ಮಿಕತೆಯ ಜೀವಂತ ನಿದರ್ಶನವಾಗುತ್ತಾರೆ.

## ಆಧುನಿಕ ಅವತಾರಪುರುಷ

ಶ್ರೀರಾಮಕೃಷ್ಣರ ಜೀವನ, ಆದರ್ಶ ಹಾಗೂ ಅವರ ಆಧ್ಯಾತ್ಮಿಕ ಶಕ್ತಿ ರಾಮಕೃಷ್ಣ ಮಹಾಸಂಘದ ಮೂಲಕ ತಲೆಮಾರಿನಿಂದ ತಲೆಮಾರಿಗೆ ಬೆಳೆದುಬಂದ ಬಗೆಯನ್ನು ಗಮನಿಸುವ ಮೂಲಕ ಅವತಾರ ಪುರುಷನ ಅಸಾಧಾರಣ ಲೀಲೆಯನ್ನು ಸ್ಪಷ್ಟವಾಗಿ ಮನಗಾಣಬಹುದು. ಶ್ರೀರಾಮಕೃಷ್ಣರೇ ಸ್ವಾಮಿ ವಿವೇಕಾನಂದರಿಗೆ ಹೇಳಿದ್ದರು, ''ಯಾರು ಹಿಂದೆ ರಾಮನಾಗಿ, ಕೃಷ್ಣನಾಗಿ ಬಂದಿದ್ದನೋ ಅವನೇ ಈಗ **ರಾಮಕೃಷ್ಣ**ನಾಗಿ ಬಂದಿದ್ದಾನೆ.'' ಅವರೊಂದಿಗೆ ಲೀಲಾಸಹಾಯಕರಾಗಿ ಸಾಕ್ಷಾತ್ ಜಗನ್ಮಾತೆಯೇ ಶ್ರೀಶಾರದಾದೇವಿಯವರ ಮೂಲಕ ಧರೆಗೆ ಇಳಿದು ಬಂದರು. ಪರಶಿವನ ಅವತಾರವಾಗಿ (ಅಥವಾ, ಶ್ರೀರಾಮಕೃಷ್ಣರು ದಿವ್ಯ ದರ್ಶನದಲ್ಲಿ ಕಂಡಂತೆ ಸಪ್ತರ್ಷಿಗಳೊಬ್ಬರ ಅವತಾರವಾಗಿ) ಸ್ವಾಮಿ ವಿವೇಕಾನಂದರು ಮೂಡಿಬಂದರು. ಇನ್ನು ಉಳಿದ ಅಂತರಂಗ ಶಿಷ್ಯರೆಲ್ಲ ಸಂನ್ಯಾಸಿಗಳಾದರು; ಅವರೆಲ್ಲರೂ ಒಂದಲ್ಲ ಒಂದೊಂದು ವಿಧದಲ್ಲಿ ದೈವಾಂಶಸಂಭೂತರೇ. (ಉದಾಹರಣೆಗೆ, ಸ್ವಾಮಿ ಶಾರದಾನಂದರು ಹಾಗೂ ಸ್ವಾಮಿ ರಾಮಕೃಷ್ಣಾನಂದರು ಇಬ್ಬರೂ ಕ್ರಿಸ್ತನ ಅನುಯಾಯಿಗಳು; ಸ್ವಾಮಿ ಪ್ರೇಮಾನಂದರು ರಾಧೆಯ ಅಂಶ.) ಶ್ರೀರಾಮಕೃಷ್ಣರ ಅವತಾರದಿಂದ ಚಾಲನೆಗೊಂಡ ದಿವ್ಯಕಾರ್ಯವನ್ನು ಪೂರೈಸಲು ಇವರೆಲ್ಲ ತಮ್ಮದೇ ಆದ ರೀತಿಯಲ್ಲಿ ದುಡಿದರು; ರಾಮಕೃಷ್ಣ ಮಹಾಸಂಘದ ಮೂಲಕ ಈ ಕಾರ್ಯ ಇಂದಿಗೂ ಮುನ್ನಡೆಯುತ್ತಿದೆ.

## ಸಮಾಜದಲ್ಲಿ ಆಧ್ಯಾತ್ಮಿಕ ಜಾಗೃತಿ, ನವೀನ ಸ್ಫೂರ್ತಿ

ಹೀಗೆ ಅವತಾರ ಪುರುಷನ ಆಗಮನದಿಂದ ಸಮಾಜದ ಮೇಲೆ ಉಂಟಾಗುವ ಪ್ರಭಾವವೆಂಥದು? ಧಾರ್ಮಿಕ ಜಾಗೃತಿ ಎಷ್ಟೇ ಉಂಟಾಗಿರಲಿ, ಸಮಾಜ ಕೆಲವು ವರ್ಷಗಳ ನಂತರ ಜಡ ವಾಗುತ್ತದೆ; ಜನರ ನೈತಿಕ, ಧಾರ್ಮಿಕ ಮೌಲ್ಯ ಕುಸಿಯುತ್ತದೆ. ಭೌತಿಕತೆ, ನಾಸ್ತಿಕತೆ, ಅಧರ್ಮ ಕ್ರಮೇಣ ಮೆರೆದಾಡಲಾರಂಭಿಸುತ್ತದೆ. ಇದೇ 'ಧರ್ಮಗ್ಲಾನಿ.' ಅಂತಹ ಕಾಲದಲ್ಲಿ ಅವತಾರ ಪುರುಷನ ಆವಿರ್ಭಾವ ಅನಿವಾರ್ಯವಾಗುತ್ತದೆ. ಒಬ್ಬೊಬ್ಬ ಅವತಾರಪುರುಷನ ಪ್ರಭಾವ ಅನೇಕ ಶತಮಾನಗಳ ಕಾಲ ಜನಮನದಲ್ಲಿ ಜೀವಂತವಾಗಿರುತ್ತದೆ; ಅಲ್ಲಿಯವರೆಗೂ ಜನರಲ್ಲಿ ಧರ್ಮ, ಅಧ್ಯಾತ್ಮ, ನೀತಿಗಳನ್ನು ಹಿಡಿದಿಡುವಲ್ಲಿ ಅವತಾರ ಪುರುಷರ ಪ್ರಭಾವ ಬಹಳ ಪ್ರಮುಖ ಶಕ್ತಿಯಾಗಿರುತ್ತದೆ. ಅಂಥ ಅವತಾರ ಪುರುಷರ ಜೀವಿತಕಾಲದಲ್ಲಿ ಅವರ ಆಧ್ಯಾತ್ಮಿಕ ಪ್ರಭೆ ಅತ್ಯಂತ ಶಕ್ತಿಶಾಲಿಯಾಗಿಯೂ, ಅಯಸ್ಕಾಂತದಂತೆ ಸೆಳೆತದಿಂದ ಕೂಡಿದ್ದೂ ಅಲ್ಲದೆ, ಅತ್ಯಂತ ಪ್ರಭಾವಶಾಲಿಯೂ ಆಗಿರುತ್ತದೆ. ಅದರಿಂದಾಗಿ ಸಾಮಾನ್ಯ ಜನರೂ ಶ್ರದ್ಧೆ, ಪ್ರಾಮಾಣಿಕತೆ, ಭಕ್ತಿ, ಸಾಧನೆಗಳಿಂದ ಸಾಕ್ಷಾತ್ಕಾರದ ಕಡೆಗೆ ಮುನ್ನಡೆಯುವಂತಾಗುವುದು. ಆಗಿನ ಒಂದೊಂದು ಘಟನೆಯೂ ಮುಂದೆ ಚಾರಿತ್ರಿಕ ದಾಖಲೆಯೆನಿಸುವುದು. ಜನರೆಲ್ಲ ಆಶ್ಚರ್ಯಚಕಿತರಾಗಿ, 'ಇದೇನೀ ವಿಚಿತ್ರ!' ಎಂದು ದಿವ್ಯತೆಯ ಮುಂದೆ ಬೆರಗಾಗುವರು. ಆದರೆ ಮುಂದೆ ತಲೆಮಾರುಗಳು ಸಾಗಿದಂತೆ ಈ ಶ್ರದ್ಧೆ ವಿಶ್ವಾಸಗಳು ಸಡಿಲವಾಗುತ್ತ ಸಾಗುವುದು, ಕ್ರಮೇಣ ವಿರಳವಾಗುವುದು. ಆದರೆ ಎಲ್ಲ ಕಾಲಕ್ಕೂ ಶ್ರದ್ಧಾಳುಗಳು, ಸಾಧುಸಂತರು ಹುಟ್ಟುತ್ತಿರುತ್ತಾರೆ; ಅವತಾರ ಪುರುಷರ ಜೀವನದಿಂದ ನಿರಂತರ ಸ್ಫೂರ್ತಿ ಪಡೆದು ಆಧ್ಯಾತ್ಮಿಕ ಪಥದಲ್ಲಿ ಮುನ್ನಡೆಯುತ್ತಿರುತ್ತಾರೆ. 'ಇಂಥ ಅವತಾರಗಳಲ್ಲೆಲ್ಲ ವರಿಷ್ಠರು (ಅಂದರೆ ಶ್ರೇಷ್ಠರು, ಹೆಚ್ಚಿನವರು) ಶ್ರೀರಾಮಕೃಷ್ಣರು' ಎಂದು ಸ್ವಾಮಿ ವಿವೇಕಾನಂದರು ತಮ್ಮ ಗುರುಗಳನ್ನು ಸ್ತುತಿಸಿದ್ದಾರೆ. ಹಾಗೆ ಅವರು ಕರೆಯಲು ಕಾರಣವಿದೆಯೆ? ಮುಂದೆ ಅದನ್ನು ಗಮನಿಸಬೇಕಾಗಿದೆ. *(ಮುಂದಿನ ಸಂಚಿಕೆಗೆ)*